ಬರುವ ಇನ್ನಿತರ ಕಾಯಿಲೆಗಳಿಂದ ನನ್ನನ್ನು ದೂರವಿಟ್ಟಿದೆ ಅನ್ನುವುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಇಲ್ಲವಾದರೆ ಅಲ್ಲಿಯ ತನಕ ನಿತ್ಯ ರಾತ್ರಿ ಮನೆಗೆ ಬರುವ ಹೊತ್ತಿಗೆ ಯಾರನ್ನಾದರೂ ಬೈದುಕೊಂಡು ಬರುವುದೋ, ಕಾರಿನ ಹಿಂದೆಯೋ ಪಕ್ಕದಲ್ಲೋ ಆಗಿರುವ ತರಚು ಗಾಯಗಳನ್ನು ನೋಡುತ್ತ ಮನಸೋ ಇಚ್ಛೆ ಶಾಪ ಹಾಕುವುದೋ ಮಾಮೂಲಾಗಿ ಹೋಗಿತ್ತು. ಮೆಟ್ರೋ ಶುರುವಾದ ಮೇಲೆ ಆಫೀಸಿಗೆ ಕಾರು ತಗೊಂಡು ಹೋಗಿದ್ದರೆ ಕೇಳಿ! ಎರಡು ತಾಸು ಬೇಕಾಗುವ ಪ್ರಯಾಣಕ್ಕೆ, ಇಪ್ಪತ್ತೈದು ನಿಮಿಷಗಳು ಸಾಕಾದರೆ ಯಾರಾದರೂ ಇನ್ನೇನು ಮಾಡುತ್ತಾರೆ?

ನನಗೆ ಮೊದಲೇ ರೈಲು ಪ್ರಯಾಣವೆಂದರೆ ಇಷ್ಟ. ಬದುಕಿಗೆ ಸಮೀಪದ ರೂಪಕ ರೈಲು. ಬೇರೆಲ್ಲ ಸಾರ್ವಜನಿಕ ಸಾರಿಗೆಗಳಿಗಿಂತ ಈ ಹಳಿಗಳ ಮೇಲೆ ಚಲಿಸುವ ಪುಟ್ಟ ಜಗತ್ತು ಮನಸ್ಸಿಗೆ ಹತ್ತಿರವಾಗುತ್ತದೆ. ಮೆಟ್ರೋ ಇಷ್ಟವಾಗಿರುವುದು ಕೂಡ ಇದೇ ಕಾರಣಕ್ಕೆ. ಬೆಂಗಳೂರೆಂಬ ಮಾಯನಗರಿಯ ಬಗೆಬಗೆಯ ಮಂದಿಗೆ ಮೆಟ್ರೋ ನಿತ್ಯಸೇತು. ಇಲ್ಲಿವರೆಗೆ ಅವರವರ ಕಾರುಗಳಲ್ಲೋ, ಬೈಕುಗಳಲ್ಲೋ, ಆಫೀಸು ಕ್ಯಾಬುಗಳಲ್ಲೋ ಸಾಗುತ್ತಿದ್ದ ಮಂದಿಯೆಲ್ಲ ಈಗ ಒಂದೇ ಬಂಡಿಯ ಸಹಚರರು. ಇಷ್ಟುಕಾಲ ತಮ್ಮ ತಮ್ಮ ಖಾಸಗೀ ಜಗತ್ತುಗಳಲ್ಲಿ ಬಂಧಿಯಾಗಿದ್ದವರಿಗೆ ಈಗ ನೂತನ ಬಂಧವೊಂದಕ್ಕೆ ತೆರೆದುಕೊಳ್ಳುವ ಸಾಧ್ಯತೆ. ಅಂದೆಂದೋ ಸುಮ್ಮನೆ ಪಕ್ಕಕ್ಕೆ ಜರುಗಿ ಬನ್ನಿ ಬನ್ನಿ ಅಂತ ಕರೆದು ಸೀಟು ಕೊಟ್ಟವನೀಗ ಹೊಸ ಸ್ನೇಹಿತನಾಗಿದ್ದಾನೆ. ರಷ್ಶಿನಲ್ಲಿ ನಿಂತಿದ್ದಾಗ 'ನಿಮ್ಮ ಬ್ಯಾಗು ನಾನಿಟ್ಟುಕೊಳ್ಳುತ್ತೇನೆ ಕೊಡಿ' ಎಂದ ಆಂಟಿ ತಿಂಗಳ ಮೇಲೆ ಕಂಡರೂ, ಮುಖದ ಮೇಲೆ ಹಿತದ ಮುಗುಳುನಗೆ.

ಮೆಟ್ರೋದಲ್ಲಿ ಕಾಣಸಿಗುವ ಹೆಚ್ಚಿನವರು ನಿತ್ಯದ ಕೆಲಸಕ್ಕಾಗಿ ಓಡಾಡುವ ಮಂದಿ. ಅದದೇ ದಿನಚರಿಗೆ ತಮ್ಮನ್ನ ತಾವು ಒಗ್ಗಿಸಿಕೊಂಡವರು. ಇಲ್ಲಿ ಗೆ ಬರುವ ಎಲ್ಲರೂ ಕೂಡ ಒಂದು ಚುಟುಕು ಪ್ರಯಾಣಕ್ಕಷ್ಟೇ ತಮ್ಮನ್ನ ಸಜ್ಜುಗೊಳಿಸಿಕೊಂಡು ಬಂದವರು. ನಿಜವಾದ ಕೆಲಸ ಬೇರೆಲ್ಲೋ ಇದೆ, ಈ ಜರ್ನಿ ಇನ್ನೇನು ಮುಗಿದೇ ಹೋಗುವ ವಿಷಯ ಎನ್ನುವ ಹಾಗೆ ನಿಂತಿರುವವರು. ಆದರೆ ಹಾಗೆ ಬಂದು ನಿಂತ ಅವರಿಗೂ ಕೂಡ ಮುಂದಿನ ಇಪ್ಪತ್ತೋ ಇಪ್ಪತ್ತೈದೋ ನಿಮಿಷಗಳಷ್ಟು ಕಾಲ ಏನು ಮಾಡಬೇಕು ಎನ್ನುವ ಸಿದ್ಧತೆ ಇದೆ. ಕೆಲಸಲ ಈ ಮೆಟ್ರೋ ಅನ್ನುವುದು ಬೆಳಗಿಂದ ಸಂಜೆಯವರೆಗೆ ಆಫೀಸಿನಲ್ಲಿ ನಡೆಯುವ ಪ್ರಹಸನಕ್ಕೆ ಬಣ್ಣ ಹಚ್ಚಿಕೊಳ್ಳಲು ಸಿದ್ಧಪಡಿಸಿರುವ ಗ್ರೀನ್ ರೂಮಿನಂತೆ ಭಾಸವಾಗುತ್ತದೆ. ತಮ್ಮ ಬಾಸಿಗೆ ಫೋನು ಹಚ್ಚಿ 'ಸರ್, ಲಿಟಲ್ ಲೇಟ್ ಸರ್, ವಿಲ್ ಬಿ ದೇರ್ ಇನ್ ಹಾಫೆನವರ್ ಸರ್' ಎಂದು ವಾಕ್ಯಕ್ಕೆ ಮೂರು ಸರ್ ಹಚ್ಚಿ ಕೃತಕ ವಿಧೇಯತೆ ತೋರಿಸುವವರೂ, ನಿಂತೋ ಕೂತೋ ಲ್ಯಾಪ್ಟಾಪು ತೆರೆದಿಟ್ಟುಕೊಂಡು ಗಹನವಾದ ಚಿಂತನೆಯಲ್ಲಿ ತೊಡಗಿದವರು, ಕಚೇರಿಯ ವಾಟ್ಸಾಪು ಗ್ರೂಪುಗಳ ಜಾಲಾಡುತ್ತ ಗಂಭೀರ ಇಮೋಜಿಗಳ ಕಳಿಸುತ್ತ ಕೂತಿರುವ ಮಂದಿ, ಹೀಗೆ. ಇನ್ನು ಅರ್ಧಕ್ಕರ್ಧ ಜನ ಗಾಳಿಗೆ ಮಂದಗತಿಯಲ್ಲಿ ತೊನೆಯುತ್ತ ನಿಂತಿರುವ ತೆಂಗಿನ ಮರದ ಹಾಗಿನವರು. ಕಿವಿಯೊಳಗೆ ತುರುಕಿರುವ ಹ್ಯಾಂಡ್ಸ್ ಫ್ರೀಗಳು ಮೊಬೈಲಿನಿಂದೆತ್ತಿ ಕೇಳಿಸುತ್ತಿರುವ ಹಾಡುಗಳಿಗೆ ತಿಳಿಯದೆಯೇ ಕಣ್ಣುಮುಚ್ಚಿ ತಲೆದೂಗಿಸುತ್ತ ನಿಂತ ಈ ಮಂದಿ ಅದು ಯಾವ ಮಾಯಕದಲ್ಲೋ, ತಮ್ಮ ನಿಲ್ದಾಣ ಬಂದ ಕೂಡಲೇ ಸಮಾಧಿ ಸ್ಥಿತಿಯಿಂದ ತಿಳಿದೆದ್ದು ಬಡಬಡನೆ ಇಳಿದು ಹೋಗಿಬಿಡುತ್ತಾರೆ! ಪ್ರಾಯಶಃ ಹಾಡಿನ ಜೊತೆ ಜೊತೆಗೆಯೇ ಮುಂಬರುವ ಸ್ಟೇಷನ್ನಿನ ಘೋಷಣೆಯೂ ಅವರ ಮೆದುಳನ್ನು ಸೇರಿ, ರಪ್ಪನೆ ಎಚ್ಚರಿಸುತ್ತದೆ.

ಅದಾವ ಪರಿಯ ನೂಕು ನುಗ್ಗಲು ಇದ್ದರೂ ಕಾದಂಬರಿಯನ್ನು ಕೈಯಲ್ಲಿ ಹಿಡಿದುಕೊಂಡು ಪುಟ ತಿರುಗಿಸಿಕೊಂಡು ಓದುವ ಅಮೋಘ ಸಾಹಸಿಗಳೂ ಇಲ್ಲಿದ್ದಾರೆ. ಮುಲಾಜೇ ಇಲ್ಲದೇ ಜೋರು ಸ್ಪೀಕರಿನಲ್ಲಿ ಹಾಡು ಕೇಳುವ, ಸಿನಿಮಾ ನೋಡುವ ಮಂದಿಗೂ ಏನೂ ಬರವಿಲ್ಲ. ಆದರೆ ಹೀಗೆ ಯಾವುದರೊಳಗಾದರೂ ಕಳೆದು ಹೋಗದೇ ಕಣ್ಣು ತೆರೆದುಕೊಂಡಿದ್ದರೆ ಕಾಣುವ ವಿಶ್ವ, ಬೇರೆಯದೇ ತೆರನಾದದ್ದು. ತನ್ನ ಹುಡುಗಿಯನ್ನು ಬೇರೆ ಯಾರಾದರೂ ತಳ್ಳಿಗಿಳ್ಳಿದರೆ ಕಷ್ಟ ಎಂದು ಅವಳನ್ನ ಅವಚಿ ಹಿಡಿದುಕೊಂಡಿರುವ ಯುವಕ, ದಾರಿ ತಪ್ಪಿ ಬಂದು ನಿಂತ ಹಾಗೆ ಬೆರಗುಗಣ್ಣುಗಳಿಂದ ಮೆಟ್ರೋದ ಸೊಬಗು ನೋಡುವ ಪುಟ್ಟ ಮಕ್ಕಳು, ಅತ್ತಿತ್ತ ನೋಡುತ್ತ ಮೆಜೆಸ್ಟಿಕ್ ಯಾವಾಗ ಬರತ್ತೆ ಎಂದು ದಿಗಿಲಲ್ಲಿ ಪದೇ ಪದೇ ಕೇಳುವ ಪಾನಿಪೂರಿ ಮಾರುವ ಬಿಹಾರಿ ಹುಡುಗ, ಪಕ್ಕಾ ಲೋಕಲ್ ಟ್ರೇನಿನಲ್ಲಿ ಶೌಚಾಲಯದ ಪಕ್ಕ ದೊಡ್ಡ ಚೀಲ ಇಟ್ಟುಕೊಂಡು ಕೂರುತ್ತಾರಲ್ಲ ಹೂಬೇಹೂಬು ಹಾಗೆಯೇ ಒಂದು ಚೀಲ ಹೊತ್ತುಕೊಂಡು ಬಂದು, ಅಲ್ಲೇ ಮೂಲೆಯಲ್ಲಿ ಕೂರುವುದಕ್ಕೆ ಹೊರಟು ಬೈಸಿಕೊಳ್ಳುತ್ತಿರುವ ಯಾವುದೋ ಹಳ್ಳಿ ಕಡೆಯ ದಂಪತಿ, ಇನ್ನೇನು ತಮ್ಮ ಗತಿ ಎಂದು ಆ ಗಂಡ ಹೆಂಡತಿ ಕಂಗಾಲಾಗುವ ಹೊತ್ತಲ್ಲಿ'ಅಯ್ಯೋ ಬಿಡ್ರೀ ಪಾಪ ಗೊತ್ತಾಗಲ್ಲ ಯಾಕೆ ಸುಮ್ನೆ ರೇಗುತ್ತೀರಿ' ಎಂದು ಅವರನ್ನ ವಹಿಸಿಕೊಂಡು ಬಂದು, ಥಕ್ಕಂತ ಅವರುಗಳಿಗೆ ಆಶಾಕಿರಣವಾಗುವ ಇನ್ಯಾರೋ ಸೂಟು ಬೂಟಿನ ಸಾಹೇಬರು ಹೀಗೆ ಥರಹೇವಾರಿ ಚಲಿಸುವ ಚಿತ್ರಗಳು ಮೆಟ್ರೋದಲ್ಲಿ ಸದಾ ಲಭ್ಯ.

ಒಂದು ದಿನ, ನನ್ನ ಪಕ್ಕದಲ್ಲೇ ಒಬ್ಬಾತ ಬಂದು ನಿಂತ. ಇವನನ್ನ ಎಲ್ಲೋ ನೋಡಿದ ಹಾಗಿದೆಯಲ್ಲ ಎನ್ನುವ ಯೋಚನೆ ನನ್ನದು. ಮುಖ ಚಹರೆಗಳನ್ನು ಬಲುಬೇಗ ಮರೆಯುವುದು ನನ್ನ ತೊಂದರೆಗಳಲ್ಲೊಂದು. ಶಿಸ್ತಾದ ಫಾರ್ಮಲ್ ಪ್ಯಾಂಟು, ಖಡಕ್ ಇಸ್ತ್ರಿಯ ಶರಟೂ, ಟೈಯೂ ಹಾಕಿಕೊಂಡು ಮುಗುಮ್ಮಾಗಿ ನಿಂತಿದ್ದ ಅವನು ಯಾರು ಎಂದು ಎಷ್ಟು ಹೊತ್ತಾದರೂ ನೆನಪಾಗಲಿಲ್ಲ. ನಾನು ಯಾವುದಕ್ಕೂ ಇರಲಿ ಅಂತ ಒಂದು ಪೆಚ್ಚು ನಗೆ ನಕ್ಕೆ. ಆ ಕಡೆಯಿಂದಲೂ ಅದೇ ರಿಪ್ಲೈ ಬಂತು. ಮತ್ತೆ.. ಹೇಗಿದ್ದೀರಿ ಎಂದು ಕೇಳಿದೆ. ಅಷ್ಟಾದರೂ ಒಳಗೆ ಮೆದುಳಿಂದ ಯಾವ ಸಂದೇಶವೂ ಬರಲಿಲ್ಲ. ಐ ಆಮ್ ಗುಡ್ ಎಂದು ಗಂಭೀರವಾಗಿಯೇ ಹೇಳಿದ ಅವನಿಂದ ಮರುಪ್ರಶ್ನೆಯೇನೂ ಬರಲಿಲ್ಲ. ಮಾತಾಡೋಕೆ ಇಷ್ಟ ಇಲ್ಲ ಅನ್ನಿಸಿ ನನಗೂಯಾರೂಂತ ನೆನಪಾಗುತ್ತಲೂ ಇಲ್ಲದ ಕಾರಣಕ್ಕೆ ಸುಮ್ಮನಾದೆ. ಮುಂದಿನ ಸ್ಟೇಷನ್ನು ಬಂದಕೂಡಲೇ ಆಸಾಮಿ ಬಾಗಿಲಾಚೆಗೆ ನಡೆದು ಹೋದ. ಹಾಗೆ ಹೋಗುತ್ತಿರುವ ಘಳಿಗೆಯಲ್ಲಿ ಕಾಲು ಸ್ವಲ್ಪ ಎತ್ತಿ ಹಾಕುವ ಆತನ ಆ ನಡಿಗೆ ನೋಡಿ ಫಕ್ಕನೆ ಹೊಳೆಯಿತು. ರೌಡಿ ಸಂತು. ಕಾಲೇಜಿನಲ್ಲಿ ನನ್ನ ಸೀನಿಯರ್ ಆಗಿದ್ದ ಈ ಪುಣ್ಯಾತ್ಮ ತನ್ನ ಅಬ್ಬರದ ರೌಡಿಸಂಗೇ ಪ್ರಸಿದ್ಧಿ. ಒಂದಾದರೂ ಕ್ಲಾಸಿನಲ್ಲಿ ಪಾಠ ಕೇಳುತ್ತ ಆತ ಕೂತಿದ್ದು ಗೊತ್ತಿಲ್ಲ. ಸದಾಕಾಲ ಬಾಯಿತುಂಬ ಗುಟ್ಕಾ ಅಗಿಯುತ್ತ, ಹುಡುಗೀರನ್ನ ರೇಗಿಸುತ್ತ, ಪುಡಿ ಚಿಲ್ಲರೆ ಪುಂಡಾಟಿಕೆ ಮಾಡಿಕೊಂಡು 'ರೌಡಿ ಸಂತು' ಅಂತಲೇ ಫೇಮಸ್ಸಾದ ಮನುಷ್ಯ. ಅವನೇ ಇವನಾ ಎಂದು ಯೋಚಿಸಿ ಅಬ್ಬಬ್ಬ ರೂಪಾಂತರವೇ ಎಂದು ಅಚ್ಚರಿಗೊಂಡೆ! ಪ್ರಾಯಶಃ ತನ್ನ ಬದಲಾದ ಸ್ವರೂಪವನ್ನು ಪೂರ್ವಾಶ್ರಮದ ಯಾವನೋ ಒಬ್ಬ ಕಂಡದ್ದು ಅವನಿಗೆ ಇಷ್ಟವಾಗಲಿಲ್ಲವೋ ಅಥವಾ ನಾನು ಯಾರೂಂತ ಗೊತ್ತೇ ಆಗಲಿಲ್ಲವೋ, ಏನೋ!

ಮೊದಲ ಬಾರಿಗೆ ಮೆಟ್ರೋ ಪಯಣ ಮಾಡುವ ಬರುವ ಹಲವು ಮಂದಿ ಮಯ ನಿರ್ಮಿತ ಧರ್ಮರಾಜನ ಮಂಟಪಕ್ಕೆ ಬಂದ ಹಾಗೆ ಅಯೋಮಯರಾಗುತ್ತಾರೆ. ಯಾವುದೋ ಕೆಲಸದ ನಿಮಿತ್ತ ಬಂದವರು ಒಂಚೂರು ಮೆಟ್ರೋ ಓಡಾಡಿಕೊಂಡು ಬರೋಣ ಎಂದು ಸ್ಟೇಷನ್ನಿಗೆ ಬರುತ್ತಾರೆ. ಟಿಕೇಟು ಎಂದು ಕೊಟ್ಟ ಬಿಲ್ಲೆ, ಅದನ್ನು ಇಟ್ಟಕೂಡಲೇ ರಪ್ಪಂತ ತೆಗೆದು, ಒಂದೆರಡು ಸೆಕೆಂಡುಗಳ ಒಳಗೆ ಮುಚ್ಚಿಕೊಳ್ಳುವ ಪುಟ್ಟ ಗೇಟು ಇದನ್ನೆಲ್ಲ ನೋಡಿ, ಕ್ಷಣಕಾಲ ಕಂಗಾಲಾದರೂ, ಅಕ್ಕಪಕ್ಕದೋರ ಥರಹವೇ ತಾವೂ ಮಾಡಲು ಹೋಗಿ ಕೆಕರುಮಕರಾಗಿ ತಗಲು ಹಾಕಿಕೊಳ್ಳುತ್ತಾರೆ. ತಮಗೆಲ್ಲ ಗೊತ್ತಿದೆ ಬಿಡಿ ಎನ್ನುವ ಹಾಗೆ ನಕ್ಕು ಬಿಲ್ಲೆ ಇಡಲು ಹೋದರೆ ಅದೇನೋ ಕೆಂಪುಕೆಂಪನೆ ಬೆಳಕು ಬೀರಿ ಪೀಪೀ ಎಂದುದೊಡ್ಡ ಸದ್ದು ಮಾಡಿ, ಮುಂದೆ ಆಗಷ್ಟೇ ತೆರೆದಿದ್ದ ಹಸಿರು ಬಾಗಿಲುಮುಲಾಜೇ ಇಲ್ಲದೇ ಮುಚ್ಚಿಕೊಂಡು ಸ್ವರ್ಗಪ್ರವೇಶವೇ ರದ್ದಾಗಿ ಹೋಯಿತೇನೋ ಎಂಬ ಸೀನು ಕ್ರಿಯೇಟ್ ಆಗಿಬಿಡುತ್ತದೆ. ಹಾಗಾದಕೂಡಲೇ ಇವರು ಶಸ್ತ್ರಸಂನ್ಯಾಸ ಮಾಡಿ ಯಾರಾದರೂ ಏನಾದರೂ ಸಹಾಯ ಮಾಡಿ ಎಂಬಂತೆ ದಯನೀಯ ದೃಷ್ಟಿ ಬೀರುತ್ತಾರೆ. ಆಗ ಯಾರಾದೊಬ್ಬರು ಮೆಟ್ರೋ ಪರಿಣಿತರು ಮುಂದೆ ಬಂದು ಸ್ವಲ್ಪ ಹಿಂದೆ ಬನ್ನಿ.. ಹಾಂ.. ನೋಡಿ ಇದು ಹೀಗೆ ಎಂಬಂತೆ ಸಹಕರಿಸಿ ಹೋಗುವುದು ಅನೂಚಾನವಾಗಿ ನಿತ್ಯವೂ ಕಂಡುಬರುವ ದೃಶ್ಯ. ಅವರುಗಳು ಒಳಗೆ ಬರುತ್ತ ಅಬ್ಬ, ಯುದ್ಧ ಗೆದ್ದೆವಪ್ಪ ಎಂಬಂತೆ ನಕ್ಕು ಸಾಗುವುದೂ ಕೂಡ ತಪ್ಪಿಲ್ಲದೇ ನಡೆವ ಆಚರಣೆ. ■